‘ದೀಪವಿರದ ದಾರಿಯಲ್ಲಿ’ ಕಾದಂಬರಿಯ ಮೂಲಕ ಕನ್ನಡ ಸಾಹಿತ್ಯ ಲೋಕದ ಗಮನ ಸೆಳೆದ ಲೇಖಕ ಸುಶಾಂತ್ ಕೋಟ್ಯಾನ್ ಅದಾಗಲೇ 11 ಕಾದಂಬರಿಗಳನ್ನು ಬರೆದಿದ್ದಾರೆ. 16 ಕಿರು ಕಾದಂಬರಿಗಳನ್ನು ಬರೆದಿದ್ದಾರೆ. ಬರವಣಿಗೆಯ ಜೊತೆಗೆ ತುಳು ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಉಡುಪಿ ಜಿಲ್ಲೆಯ ಮುಂಡ್ಕೂರು ಗ್ರಾಮದ ಸಚ್ಚರಿಪೇಟೆಯವರಾದ ಅವರು ಗ್ರಾಫಿಕ್ ಡಿಸೈನರ್.

ನುಣ್ಣಗೆ ಬೋಳಿಸಿಕೊಂಡು ನಾಟಕದಲ್ಲಿ ಸ್ತ್ರೀಪಾತ್ರ ಮಾಡುವ ಅವನ ಭಾವ-ಭಂಗಿ, ನಡಿಗೆಯಲ್ಲೂ ಕೂಡಾ ಸ್ತ್ರೀಸಹಜವಾದ ಲಾಲಿತ್ಯವಿತ್ತು. ಅವನು ಸಮೀಪನಾಗುತ್ತಿದ್ದಂತೆ ಅವನ ಕಣ್ಣಮೇಲಿನ ಹುಬ್ಬು, ಸ್ತ್ರೀಯರ ಹುಬ್ಬಿನಂತೆ ಸಪೂರವಾಗಿ ಒಪ್ಪವಾಗಿರುವುದು ಕಂಡು ಖುಷಿಯಾಗಿತ್ತು. ಜೊತೆಗೆ ತನ್ನೊಳಗಿನ ಸ್ತ್ರೀ ಮನಸ್ಸಿಗೆ ಅವನಿಗಿರುವ ಸ್ವಾತಂತ್ರ್ಯವನ್ನು ಕಂಡು ಜಲಸಿಯಾಗಿತ್ತು ಕೂಡಾ!.

‘ಅಯ್ಯೋ ಸುಸ್ತಾಯ್ತು ಕಣೋ...’ ಅನ್ನುತ್ತಲೇ ಬಂದು ಕರುಣಾಕರನ ಪಕ್ಕಕ್ಕೇ ದಂಡೆಯೇರಿ ಕುಳಿತನು. ಕರುಣಾಕರನಿಗೆ ಅವನ ಮಾತಿನಲ್ಲಿ ಗಮನವಿಲ್ಲ. ಅವನು ರಾಜೇಶನ ಮುಖವನ್ನೇ ದಿಟ್ಟಿಸುತ್ತಾ, ‘ಐಬ್ರೊ ಶೇಪ್ ಮಾಡಿದ್ದೀಯಾ?’ ಕೇಳಿದನು.

‘ಹೂಂ... ಹೇಗೆ ಕಾಣಿಸುತ್ತೆ?’ ಹುಬ್ಬು ಕುಣಿಸುತ್ತಾ ಕೇಳಿದನು ರಾಜೇಶ.

‘ಇನ್ನು ನೀನು ಆಪರೇಷನ್ ಮಾಡಿಸಿ ಕೊಳ್ಳೋದೊಂದೇ ಬಾಕಿ ನೋಡು’ ಎಂದು ನಕ್ಕನು ಕರುಣಾಕರ.

‘ಮನೆಯಲ್ಲಿ ಯಾರಿಗೂ ಗೊತ್ತಿಲ್ವಾ?’ ಎಂದು ಮತ್ತೆ ಗಂಭೀರನಾಗಿ ಕೇಳಿದನು.

‘ಅಯ್ಯೋ ಅದನ್ನೇನು ಕೇಳ್ತೀಯಾ... ಕೂದ್ಲು ಇಷ್ಟು ಉದ್ದ ಬಿಟ್ಟದ್ದಕ್ಕೇ ರಾಮಾಯಣವಾಗಿತ್ತು. ಇಷ್ಟು ದಪ್ಪಗಿನ ಐಬ್ರೊ ಶೇಪ್ ಆಗಿರ್ಬೇಕಾದ್ರೆ ಗೊತ್ತಾಗ್ದೇ ಇರುತ್ತಾ. ಶುರುವಾಗಿತ್ತು ಬೈಗುಳ... ಬಿಡು, ಅದೆಲ್ಲಾ ನನ್ನ ಜೀವನದ ಮಾಮೂಲಿ ಕಥೆಗಳು. ನೀನು ಹೇಗಿದ್ದೀಯಾ? ಮಗಳು ಖುಷಿ ಏನ್ಮಾಡ್ತಾಳೆ? ಮನೆಯಲ್ಲೆಲ್ಲಾ ಆರಾಮು ತಾನೆ?’ ತನ್ನ ವಿಷಯವನ್ನು ಪಕ್ಕಕ್ಕಿಟ್ಟು ವಿಚಾರಿಸಿದನು ರಾಜೇಶ. ಕರುಣಾಕರನ ಮುಖ ಸಪ್ಪಗಾಯಿತು. ಕರುಣಾಕರನ ಸಮಸ್ಯೆಯ ಬಗೆಗೆ ರಾಜೇಶನಿಗೆ ಗೊತ್ತಿಲ್ಲದೇ ಇಲ್ಲ. ಅವನು, ‘ಮತ್ತೆ ಮದುವೆ ವಿಚಾರನ?’ ಕೇಳಿದನು. ಕರುಣಾಕರ ಹೌದೆಂಬಂತೆ ತಲೆಯಾಡಿಸಿನು. ‘ಬಿಡೋ ಅದಕ್ಯಾಕೆ ಟೆನ್ಶನ್ ಆಗ್ತೀಯಾ. ನೀನು ಯಾವುದಕ್ಕೂ ಅಷ್ಟಾಗಿ ಇಂಟ್ರೆಸ್ಟ್ ತೋರಿಸಿಲ್ಲಾಂದ್ರೆ ಕಳೆದ ಸಾರಿ ಬಂದ ಪ್ರಪೋಸಲ್ ತಪ್ಪಿ ಹೋಯ್ತು ನೋಡು, ಇದೂ ಹಾಗೇ ಆಗತ್ತೆ’ ಎಂದು ಗೆಳೆಯನನ್ನು ಸಮಾಧಾನಿಸಿದನು. ‘ಅದೂ ಮೊದಲನೇ ಹೆಂಡ್ತಿ ಆತ್ಮಹತ್ಯೆ ಮಾಡಿಕೊಂಡು ತೀರಿಹೋಗಿದ್ದು ಅಂತ ಗೊತ್ತಾಗಿ, ಹುಡುಗ ಏನೋ ಎಂತೋ ಅಂತಾ ಹೆದರಿ ಸಂಬಂಧ ತಪ್ಪಿ ಹೋಗಿದ್ದು... ಇದು ಹಾಗಲ್ಲ. ಎಲ್ಲಾ ಗೊತ್ತಿದ್ದೂ ಮದುವೆಗೆ ಒಪ್ಕೊಂಡಿದ್ದಾರೆ’ ಎಂದು ಕರುಣಾಕರ ಮಾತು ನಿಲ್ಲಿಸಿದ್ದೇ ರಾಜೇಶ ಆಶ್ಚರ್ಯದಿಂದ, ‘ಎಲ್ಲಾ ಗೊತ್ತಿದ್ದು ಅಂದ್ರೆ?!’ ಕೇಳಿದನು.

‘ಅಯ್ಯೋ ಮಾರಾಯ, ಎಲ್ಲಾ ಅಂದ್ರೆ ನನ್ನ ಭಾವನೆಗಳ ಬಗ್ಗೆ ಅಲ್ಲ. ನನ್ನ ಹೆಂಡತಿ ಆತ್ಮಹತ್ಯೆ ಮಾಡ್ಕೊಂಡು ಸತ್ತು ಹೋಗಿರೋದು, ನನಗೊಂದು ಹೆಣ್ಮಗು ಇರೋದು ಇದೆಲ್ಲಾ ಗೊತ್ತಿದ್ದೇ ಮದುವೆಗೆ ಒಪ್ಕೊಂಡಿದ್ದಾರೆ ಅಂದೆ’ ಎಂದು ವಿವರಿಸಿದನು ಕರುಣಾಕರ.

‘ಹೌದಾ...? ಈಗೇನ್ಮಾಡೋದೂಂತ?’ ರಾಜೇಶ ಯೋಚಿಸುತ್ತಾ ಕೇಳಿದನು.

‘ಅದೇ ಗೊತ್ತಾಗ್ತಾಯಿಲ್ಲ. ದೂರದ ಪ್ರಪೋಸಲ್ ಆಗಿದ್ದಿದ್ರೆ, ನಾವೇ ಯಾರ ಕೈಯಲ್ಲಾದ್ರು ಹುಡುಗ ಸರಿ ಇಲ್ಲ, ಹಾಗೇ ಹೀಗೆ ಅಂತ್ಹೇಳಿ ತಪ್ಪಿಸಬಹುದಿತ್ತು. ಆದ್ರೆ ಈವಾಗ ಕೇಳಿರೋದು ನಮ್ಮ ಪಕ್ಕದ್ಮನೆ ಸಾವಿತ್ರಕ್ಕನ ತಂಗಿ ಸವಿತಾಳಿಗೆ. ಅವರಿಗೆ ನನ್ನ ಅಂತರಾತ್ಮವೊಂದು ಬಿಟ್ಟು ಬೇರೆಲ್ಲಾ ಗೊತ್ತಿದೆ’. ‘ಅಲ್ಲ ಮಾರಾಯ ಎಲ್ಲಾ ವಿಷಯವೂ ಗೊತ್ತಿದ್ದು, ಅವರ್ಯಾಕೆ ಅವರ ತಂಗಿನ ಎರಡನೇ ಸಂಬಂಧದಲ್ಲಿ ಮದುವೆ ಮಾಡ್ತಿದ್ದಾರೆ?’ ರಾಜೇಶ ಕೇಳಿದಾಗ ಕರುಣಾಕರ ಅಸಹನೆಯಿಂದ,